**(ದಿನಾಂಕಃ 08.04.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಡಿ.ಎನ್.ಹೆಚ್ ರವರಿಂದ ಃ–

1. ಎಸ್ ಶಿವರಾಮ ಭಟ್ಟರು ನನ್ನ ತಂದೆ. ಅವರು ಮರಣ ಹೊಂದಿರುತ್ತಾರೆ. ವಾದಿಗಳು ಸಹೋದರರಾಗಿರುತ್ತಾರೆ. ಸದರಿಯವರು ಬ್ರಾಹ್ಮಣವಾಡ ಗ್ರಾಮದಲ್ಲಿ ವಾಸವಾಗಿರುತ್ತಾರೆ ಎಂದು ಸೂಚಿಸಿದರೆ ಸರಿ.

2. ನಾನು ಮತ್ತು ವಾದಿಗಳು ಕೃಷಿ ಜಮೀನನ್ನು ಮಾಡುತ್ತೇವೆ ಎಂದು ಸೂಚಿಸಿದರೆ ಸರಿ. ನಾನು ಮತ್ತು ವಾದಿಗಳು ಒಂದೇ ಕುಟುಂಬಕ್ಕೆ ಸಂಬಂಧಿಸಿರುವುದಿಲ್ಲ. ದಾವಾ ಐಟಂ ನಂಬರ್ 1 ರ 1 ಎಕರೆ 12 ಗಂಟೆ ಇರುತ್ತದೆ ಎಂದು ಸೂಚಿಸಿದರೆ ಸರಿ. ಅದರಲ್ಲಿ 1 ಗುಂಟೆ ಖರಾಬು ಇರುತ್ತದೆ ಎಂದು ಸೂಚಿಸಿದರೆ ಸಾಕ್ಷಿಯು ಅರದ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

3. ಸದರಿ ಜಮೀನಿನ ಪೂರ್ವಕ್ಕೆ ನಮ್ಮ ಮನೆ ಮತ್ತು ಭೂಮಿ ಬರುತ್ತದೆ ಎಂದರೆ ಸರಿ. ಪಶ್ಚಿಮಕ್ಕೆಃ ಸರ್ವೆ ನಂ 4 ಬರುತ್ತದೆ ಎಂದರೆ ಸರಿ, ಉತ್ತರಕ್ಕೆಃ ಲಲಿತಮ್ಮ ರವರ ಸರ್ವೆ ನಂ 8/2 ಇರುತ್ತದೆ ಎಂದರೆ ಸರಿ ಮತ್ತು ದಕ್ಷಿಣಕ್ಕೆ ಲಲಿತಮ್ಮ ರವರಿಗೆ ಸೇರಿದ ಜಮೀನು ಇರುತ್ತದೆ ಆದರೆ ಅದರ ಸರ್ವೆ ನಂಬರ್ ಗೊತ್ತಿರುವುದಿಲ್ಲ.

4. ಐಟಂ ನಂಬರ್ 2 ಸರ್ವೆ ನಂ 4 ರ 1 ಎಕರೆ 27 ಗುಂಟೆ ವಿಸ್ತಿರ್ಣ ಇರುತ್ತದೆ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದುನುಡಿಯುತ್ತಾರೆ. ನಾನು ಸರ್ವೆ ನಂ 4 ರ ಬಾಗಾಯ್ತು ಜಮೀನನ್ನು ನೋಡಿರುತ್ತೇನೆ. ದಾವಾ ಐಟಂ ನಂಬರ್ 2 ಪೂರ್ವಕ್ಕೆ ಸರ್ವೇ ನಂ 3/2 ಇರುತ್ತದೆ ಎಂದರೆ ಸಾಕ್ಷಿಯು ನನಗೊ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಸರ್ವೆ ನಂ 5 ಇರುತ್ತದೆ ಎಂದರೆ ಸಾಕ್ಷಿಯು ನನಗೊ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಉತ್ತರಕ್ಕೆ ಸರ್ವೆ ನಂ 6 ಮತ್ತು ಸರ್ವೆ ನಂ 7/2 ರ ಜಮೀನುಗಳು ಇರುತ್ತವೆ ಎಂದು ಸೂಚಿಸಿದರೆ ಸಾಕ್ಷಿಯು ನನಗೊ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ ಮತ್ತು ದಕ್ಷಿಣಕ್ಕೆ ಸರ್ವೆ ನಂ 5 ಮತ್ತು ಸರ್ವೆ ನಂ

2 ಬರುತ್ತದೆ ಎಂದು ಸೂಚಿಸಿದರೆ ಸಾಕ್ಷಿಯು ನನಗೊ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

5. ದಾವಾ ಐಟಂ ನಂಬರ್ 3 ಸರ್ವೆ ನಂ 7/2 ರ 33 ಗುಂಟೆ ಅಡಿಕೆ ಬಾಗಾಯ್ತು ಜಮೀನು ಇರುತ್ತದೆ ಎಂದರೆ ಸರಿ. ಅದರ ಪೂರ್ವಕ್ಕೆಃ ಸರ್ವೆ ನಂ 8/1 ರ ಜಮೀನು ಇರುತ್ತದೆ ಎಂದರೆ ಸರಿ. ದಾವಾ ಸಿ ಶೆಡ್ಯೂಲ್ ಸ್ವತ್ತಿನ ಚಕ್ಕುಬಂದಿಯು ಸರಿಯಾಗಿ ಇರುತ್ತದೆ ಎಂದರೆ ಸರಿ.

6. ವಾದಿಗಳು ದಾವಾ ಆಸ್ತಿಗಳನ್ನು ಸಾಗುವಳಿ ಮಾಡುತ್ತಿರುತ್ತಾರೆ ಎಂದು ಸೂಚಿಸಿದರೆ ಸರಿ. ದಾವಾ ಆಸ್ತಿಯ ದಾಖಲಾತಿಗಳು ವಾದಿಗಳ ಹೆಸರಿನಲ್ಲಿ ಇರುತ್ತದೆ ಎಂದು ಸೂಚಿಸಿದರೆ ಸಾಕ್ಷಿಯು ನನಗೊ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಲ್ಲಿ ನಾನು ಯಾವುದೇ ಹಕ್ಕು ಮತ್ತು ಸ್ವಾಧೀನವನ್ನು ಹೊಂದಿರುವುದಿಲ್ಲ ಎಂದರೆ ಸರಿ.

7. ನಮ್ಮ ಮತ್ತು ವಾದಿಗಳ ಮಧ್ಯ ಈ ಹಿಂದೆ ಅಸಲು ದಾವಾ ಸಂಖ್ಯೆ 128/2005 ಇತ್ತು ಎಂದರೆ ಸರಿ. ಸದಿರಿ ದಾವೆಯು ನಮ್ಮ ಪರವಾಗಿ ಆಗಿ ದರ್ಕಸ್ತ ಅರ್ಜಿಯನ್ನು ಸಲ್ಲಿಸಿ ಗಡಿ ಗುರುತನ್ನು ನೇಮಿಸಿಕೊಂಡಿರುತ್ತೇವೆ ಎಂದು ಸೂಚಿಸಿದರೆ ಸರಿ. ಅದರಿಂದ ನಮ್ಮ ಮತ್ತು ವಾದಿಗಳ ಮಧ್ಯ ಮನಸ್ತಾಪ ಇರುತ್ತದೆ ಎಂದು ಸೂಚಿಸಿದರೆ ಸರಿ.

8. ನಾವು ದಿನಾಂಕಃ 12.03.2017 ರಂದು ವಾದಿಗಳ ದಾವಾ ಸ್ವತ್ತಿನ ಸ್ವಾಧೀನಕ್ಕೆ ಅಡತಲೆ ಉಂಟು ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾವು ದಾವಾ ಆಸ್ತಿಗಳ ಪೂರ್ವ ದಿಕ್ಕಿಗೆ ಗಡಿ ಬೇಲಿಯನ್ನು ಹಾಕಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ನಾವು ಊರಿನಲ್ಲಿ ತುಂಬಾ ಬಲಿಷ್ಟವಾಗಿ,ಶ್ರೀಮಂತರಾಗಿರುತ್ತೇವೆ ಎಂದರೆ ಸರಿಯಲ್ಲ.

9. ನಾವು ದಾವಾ ಆಸ್ತಿಗೆ ತೊಂದರೆ ಕೊಟ್ಟಿರುವುದರಿಂದ ವಾದಿಗಳು ನಗರ ಪೊಲೀಸ್ ಠಾಣೆಯಲ್ಲಿ ನಮ್ಮ ವಿರುದ್ಧ ದೂರನ್ನು ದಾಖಲಿಸಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ. ಆದ್ದರಿಂದ ವಾದಿಗಳು ನಮ್ಮ ವಿರುದ್ದ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಈ ದಾವೆಯನ್ನು ದಾಖಲಿಸಿರುತ್ತಾರೆ ಎಂದರೆ ಸರಿಯಲ್ಲ.

10. ನನಗೆ ದಾವಾ ಐಟಂ ನಂಬರ್ 2 ಚಕ್ಕುಬಂದಿ ಗೊತ್ತಿದ್ದರೂ ಸಹ ಈಗ ನ್ಯಾಯಾಲಯದ ಮುಂದ ಗೊತ್ತಿರುವುದಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.